**ಓ.ಎಸ್. ನಂ. 25/2021** **ಪಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 29.8.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ.ಸಿ ವಕೀಲರಿಂದಃ**

ಈ ದಾವೆಯಲ್ಲಿ ಯಾವ ಪರಿಹಾರ ಕೋರಿರುತ್ತೀರಿ ಎಂದರೆ ಸಾಕ್ಷಿದಾರರು ಪ್ರತಿವಾದಿಯು ನನಗೆ ಮರಗಳನ್ನು ಮಾರಾಟ ಮಾಡಬೇಕು ಅಥವಾ ನಾನು ನೀಡಿರುವ ಹಣವನ್ನು ಮರು ಪಾವತಿ ಮಾಡಬೇಕು ಎನ್ನುವರು. ನನ್ನ ದಾವಪತ್ರದಲ್ಲಿ ಮರಗಳನ್ನು ಮಾರಾಟ ಮಾಡದಿದ್ದರೆ ಹಣವನ್ನು ಮರು ಪಾವತಿ ಮಾಡುವಂತೆ ಪರಿಹಾರ ಕೇಳಿರುತ್ತೇನೆ. ಈ ದಾವೆ ಸಲ್ಲಿಸುವ ಸಮಯದಲ್ಲಿ ಯಾವ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಿ ಎಂದರೆ ಸಾಕ್ಷಿದಾರರು ಕರಾರು ಪತ್ರ, ಎರಡು ಮರ ಕಟಾವು ಪರವಾನಗಿಗಳನ್ನು ಹಾಜರುಪಡಿಸಿರುತ್ತೇನೆ ಎನ್ನುವರು. ಒಟ್ಟು ಎಷ್ಟು ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಈ ದಾವೆ ಸಲ್ಲಿಸುವ ಪೂರ್ವದಲ್ಲಿ ಪ್ರತಿವಾದಿಗೆ ವಕೀಲರ ಮೂಲಕ ಯಾವುದೇ ನೋಟಿಸನ್ನು ನೀಡಿರುವುದಿಲ್ಲ. ಯಾವುದೇ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ನೋಟಿಸ್ ನೀಡುವ ಪದ್ಧತಿ ಇರುತ್ತದೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ, ವಕೀಲರಿಗೆ ಗೊತ್ತಿರುತ್ತದೆ ಎನ್ನುವರು. ವಕೀಲರ ಮೂಲಕ ನೋಟಿಸ್ ನೀಡಿದರೆ ನಿಜ ವಿಚಾರ ಗೊತ್ತಾಗುತ್ತದೆ ಎಂದು ಪ್ರತಿವಾದಿಗೆ ನೋಟಿಸ್ ನೀಡದೆ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿದಾರರು ನೋಟಿಸ್ ನೀಡುವ ವಿಚಾರ ವಕೀಲರಿಗೆ ಗೊತ್ತಿರುತ್ತದೆ, ನನಗೆ ಗೊತ್ತಿರುವುದಿಲ್ಲ ಎನ್ನುವರು. 40 ಮರಗಳನ್ನು ಕಟಾವು ಮಾಡುವ ಪರವಾನಗಿಯನ್ನು ದಿನಾಂಕ 25.5.2018 ರಂದು ಪ್ರತಿವಾದಿಯ ಹೆಸರಿಗೆ ಅರಣ್ಯ ಇಲಾಖೆಯವರು ನೀಡಿರುತ್ತಾರೆ. ನಿಪಿ4 ದಾಖಲೆಯನ್ನು ಪ್ರತಿವಾದಿಯು ನನಗೆ ನೀಡಿರುತ್ತಾರೆ. ನಿಪಿ4 ನ್ನು ನಾನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನಿಪಿ4 ನ್ನು ನಾನು ಸೃಷ್ಟಿ ಮಾಡಿರುತ್ತೇನೆ ಎಂದು ಅರಣ್ಯ ಇಲಾಖೆಯವರು ಈಗ ನೋಡುತ್ತಿರುವ ದಾಖಲೆಯಂತೆ ಹಿಂಬರಹ ನೀಡಿರುತ್ತಾರೆ ಎಂದರೆ ಸಾಕ್ಷಿದಾರರು ಪ್ರತಿವಾದಿಯು ನಿಪಿ4 ದಾಖಲೆಯನ್ನು ನನಗೆ ನೀಡಿದ ನಂತರ ಅರಣ್ಯ ಇಲಾಖೆಯವರು ಬಂದು ಸದರಿ ದಾಖಲೆ ಪೋರ್ಜರಿಯಾಗಿರುತ್ತದೆ ಎಂದು ತಿಳಿಸಿದಾಗ ನಾನು ಮೇಲಾಧಿಕಾರಿಗೆ ದೂರು ನೀಡಿರುತ್ತೇನೆ ಎನ್ನುವರು. ಸದರಿ ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿದಾರರು ಮೌಖಿಕವಾಗಿ ನೀಡಿರುತ್ತೇನೆ ಎನ್ನುವರು. ಪ್ರತಿವಾದಿಯು ಅವಿದ್ಯಾವಂತನಾಗಿದ್ದು ತೇಗದ ಮರಗಳನ್ನು ಕಬಳಿಸಲು ನಾನೇ ನಿಪಿ4 ನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ನಿಪಿ4 ರಂತೆ ನನಗೆ ಯಾವುದೇ ಪರವಾನಗಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ4 ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ ನಂತರ ಪ್ರತಿವಾದಿಯು ಅರಣ್ಯ ಇಲಾಖೆಗೆ ಹೋಗಿ ವಿಚಾರಿಸಿದಾಗ ಸದರಿ ನಿಪಿ4 ನ್ನು ಅರಣ್ಯ ಇಲಾಖೆಯವರು ತಾವು ನೀಡಿರುವುದಿಲ್ಲ ಎಂದು ಹಿಂಬರಹ

ನೀಡಿರುತ್ತಾರೆ ಎಂದರೆ ಸರಿಯಲ್ಲ. ಸರಗೂರಿನ ಅಬ್ದುಲ್ ಅಜೀದ್ ಮತ್ತು ನನ್ನ ತಂದೆಯಾದ ಹಮೀದ್ ರವರು ಸಂಬಂಧಿಕರು ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರಿದು ನನ್ನ ತಂದೆ ತೀರಿಕೊಂಡು 40 ವರ್ಷವಾಗಿದ್ದು, ಕರ್ನಾಟಕದಲ್ಲಿ ಯಾರು ಸಂಬಂಧಿಕರು ಇರುವುದಿಲ್ಲ ಎನ್ನುವರು. ಅಬ್ದುಲ್ ಅಜೀದ್ ರವರಿಗೆ ಬಂದಿರುವ ಮರ ಕಟಾವು ಪರವಾನಗಿಯನ್ನು ದುರುಪಯೋಗಪಡಿಸಿಕೊಂಡು ನಾನು ಮತ್ತು ಸದರಿ ಅಬ್ದುಲ್ ಅಜೀದ್ ರವರು ಸೇರಿ ನಿಪಿ4 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಅರಣ್ಯ ಇಲಾಖೆಗೆ ದೂರು ನೀಡಿದ್ದಲ್ಲಿ ಪ್ರತಿವಾದಿಯು ಅರಣ್ಯ ಇಲಾಖೆಗೆ ಮನವಿ ನೀಡುವ ಪ್ರಶ್ನೆ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಈಗ ನೋಡುತ್ತಿರುವ ದಾಖಲೆಯು ಅರಣ್ಯ ಇಲಾಖೆಯವರು ಅಬ್ದುಲ್ ಅಜೀದ್ ರವರಿಗೆ ನೀಡಿರುವ ಮರ ಕಟಾವು ಪರವಾನಗಿ ಎಂದರೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿದಾರರಿಗೆ ದಿನಾಂಕ 23.5.2018 ರ ಮರ ಕಟಾವಣೆ ಆದೇಶವನ್ನು ತೋರಿಸಲಾಗಿರುತ್ತದೆ. ನಿಪಿ5 ಮತ್ತು 6 ರಲ್ಲಿ ಪ್ರತಿವಾದಿಯು ನನ್ನ ಜೊತೆ ಮಾತನಾಡುತ್ತಿದ್ದಾರೆ, ಸದರಿ ಭಾವಚಿತ್ರದಲ್ಲಿ ನನ್ನ ಪೋಟೋ ಇರುವುದಿಲ್ಲ. ಸದರಿ ಭಾವಚಿತ್ರವನ್ನು ನನ್ನ ಕಾರಿನ ಚಾಲಕ ತೆಗೆದಿರುತ್ತಾನೆ. ನನ್ನನ್ನು ಸೇರಿಸಿ ಭಾವಚಿತ್ರ ತೆಗೆಯಲು ತೊಂದರೆ ಇತ್ತಾ ಎಂದರೆ ಸಾಕ್ಷಿದಾರರು ನನ್ನ ಕಾರಿನ ಚಾಲಕ ಭಾವಚಿತ್ರ ತೆಗೆದಿರುತ್ತಾರೆ ಎನ್ನುವರು. ನನ್ನ ಹಾಗೂ ಪ್ರತಿವಾದಿಯ ನಡುವೆ ಯಾವುದೇ ಮಾತುಕತೆಯಾಗದಿದ್ದರೂ ಸಹ ಯಾವುದೋ ಭಾವಚಿತ್ರವನ್ನು ಎಡಿಟ್ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ಜಮೀನಿನ ಸುತ್ತ ತೇಗದ ಮರ ಇರುತ್ತವೆ ಎಂದರೆ ಸರಿ. ನಿಪಿ5 ಮತ್ತು 6 ರಲ್ಲಿ ಕಟಾವಿಗೆ ಯೋಗ್ಯವಾದ ಯಾವುದೇ ತೇಗದ ಮರಗಳ ಕಾಣಿಸುವುದಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ಸಾಕ್ಷಿಯು ತಮಿಳಿನಲ್ಲಿ ನುಡಿದ ನುಡಿ ಸಾಕ್ಷಿಯನ್ನು ಭಾಷಾಂತರಕಾರರಾದ ವೇಲುಸ್ವಾಮಿ, ವಕೀಲರು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಿದ್ದು, ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.